ಆಯ್ಕೆ ಮಾಡಿ ಕಳುಹಿಸಿಕೊಡುತ್ತದೋ ಅಂತಹ ಪುಸ್ತಕಗಳನ್ನು ಮಾತ್ರ ಖರೀದಿಸಲಾಗುವುದೆಂದು ಹೇಳಬಯಸುತ್ತೇನೆ.

ರಾಜ್ಯದಲ್ಲಿನ ವಿವಿಧ ಅಕಾಡೆಮಿಗಳಿಗೆ ಅನುದಾನವನ್ನು ಕಡಿತಗೊಳಿಸುತ್ತಿರುವ ಬಗ್ಗೆ

128 (1664) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ರಾಜ್ಯದಲ್ಲಿನ ವಿವಿಧ ಅಕಾಡೆಮಿಗಳು ಮತ್ತು ಸಂಘ-ಸಂಸ್ಥೆಗಳಿಗೆ ನೀಡುತ್ತಿರುವ ಅನುದಾನವನ್ನು ಕಡಿತಗೊಳಿಸುತ್ತಿರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಲಾಗುವುದು?

ಇ) ಎಂದಿನಿಂದ ಇದನ್ನು ಜಾರಿಗೆ ತರಲಾಗುವುದು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವೆಯವರು):

ಅ) 1) ಹೌದು.

2) ಪುಸಕ್ತ ಸಾಲಿನಲ್ಲಿ ಯೋಜನಾ ಗಾತ್ರದಲ್ಲಿ ಕಡಿತಗೊಳಿಸಿರುವುದರಿಂದ ಅಕಾಡೆಮಿಗಳಿಗೆ ಒದಗಿಸಿರುವ ಒಟ್ಟು ಹಂಚಿಕೆಯಲ್ಲಿ ತಲಾ 2.00 ಲಕ್ಷ ರೂ.ಗಳನ್ನು ಯೋಜನಾ ಬಾಬಿನಲ್ಲಿ ಕಡಿತಗೊಳಿಸಲಾಗಿದೆ.

3) ಆದರೆ ಇಲಾಖೆಯಿಂದ ಅನುದಾನ ಪಡೆಯುತ್ತಿರುವ ಸಂಘ-ಸಂಸ್ಥೆಗಳಿಗೆ ಅನುದಾನವನ್ನು ಕಡಿತಗೊಳಿಸಿರುವುದಿಲ್ಲ.

ಆ) ಮೇಲೆ ತಿಳಿಸಿದಂತೆ ಇಲಾಖೆಯ ವ್ಯಾಪ್ತಿಗೆ ಬರುವ ಅಕಾಡೆಮಿಗಳಿಗೆ ತಲಾ 2.00 ಲಕ್ಷ ರೂ.ಗಳನ್ನು ಕಡಿತಗೊಳಿಸಲಾಗಿದೆ.

ಇ) ಪ್ರಸಕ್ತ ಸಾಲಿನಲ್ಲಿ ಮಾತ್ರ ಕಡಿತ ಅನ್ವಯವಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಇದು ಸರ್ಕಾರ ಕನ್ನಡಕ್ಕೆ ಮಾಡುತ್ತಿರುವ ದ್ರೋಹವಾಗಿದೆ. ಇತ್ತೀಚೆಗೆ ಜರುಗಿದ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಸಾಹಿತ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಒಂದು ಕೋಟಿ ರೂಪಾಯಿ ಕೊಡಲಾಗುವುದೆಂದು ಇವರೇ ಒಪ್ಪಿಕೊಂಡಿದ್ದಾರೆ. ಆದರೆ, ಒದಗಿಸಿರುವ ಉತ್ತರದಲ್ಲಿ ಪ್ರಸ್ತಕ ವರ್ಷ ಅನುದಾನ ಕಡಿಮೆ ಮಾಡಿದ್ದೇವೆಂದು ತಿಳಿಸಿದ್ದಾರೆ. ಯಾವ ಕಾರಣಕ್ಕೋಸ್ಕರ ಅನುದಾನ ಕಡಿಮೆ ಮಾಡಿದ್ದೀರಿ? ನಿಮಗಿರುವ ತೊಂದರೆ ಏನು? ಇನ್‌ಫರ್ಮೇಶನ್ ಟೆಕ್ನಾಲಜಿ ಕಂಪನಿಗಳಿಗೆ, ಮತ್ತು ಸ್ಟ್ಯಾಂಪ್ ಡ್ಯೂಟಿಗೆ ಸುಮಾರು 1,200 ಕೋಟಿ ರೂಪಾಯಿಗಳ ಎಕ್ಸ್‌ಂಪ್ಷನ್ ಸಹ ಕೊಟ್ಟಿದ್ದೀರಿ. ಹೀಗೆ ಯಾವ್ಯಾವುದಕ್ಕೋ ಕೊಟ್ಟಿದ್ದೀರಿ. ಅಲ್ಲದೆ, 'ನಾನು ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಜಾರಿಗೊಳಿಸಿದರೆ ಸುಮಾರು ಎರಡು ಸಾವಿರ ರೂಪಾಯಿಗಳಷ್ಟು ಹೆಚ್ಚು ಆದಾಯ ಸರ್ಕಾರಕ್ಕೆ ಬರುತ್ತದೆ' ಎಂದು ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದ್ದಾರೆ.

12.10 ಪಿ.ಎಂ.

ಅದರಲ್ಲಿ ನೀವು ಕನ್ನಡದ ಕೆಲಸವನ್ನು ಮಾಡುತ್ತಿರುವ ಅಕಾಡಮಿಗಳಿಗೆ ಎರಡೆರಡು ಲಕ್ಷ ಅನುದಾನವನ್ನು ಕಡಿಮೆ ಮಾಡಿರತಕ್ಕದ್ದು ಸೂಕ್ತವೇ? ಕನ್ನಡಕ್ಕೆ ಪ್ರೋತ್ಸಾಹ ಕೊಡುತ್ತಿರುವ ರೀತಿ

ಸರಿಯೇ? ನಾನು ಈ ಪ್ರಶ್ನೆಯನ್ನು ಹಾಕಿದಾಗ ಒಂದು ಸರ್ಕಾರಿ ಆಜ್ಞೆಯನ್ನು ವಾಪಸ್ ತೆಗೆದುಕೊಂಡಿದ್ದೀರಿ. ತಾವು ಮಾಡಿರುವ ಒಳ್ಳೆಯ ಕೆಲಸ ಅದು. ಯಾವ ಅಕಾಡಮಿ ಕೆಲಸ ಮಾಡುವುದಿಲ್ಲ. ಏನು ತಪ್ಪಿದೆ ಅದರ ಬಗ್ಗೆ ವಿಚಾರಣೆ ಮಾಡಿ ತಾವು ಕ್ರಮ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಸಾರಾಸಗಟಾಗಿ ಅನುದಾನವನ್ನು ಕಡಿಮೆ ಮಾಡುತ್ತೇನೆ ಎಂಬ ಸರ್ಕಾರದ ಕ್ರಮ ಸರಿಯಲ್ಲ. ಕನ್ನಡ ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟ ಅಕಾಡಮಿಗಳಿಗೆ, ಯಾವುದೇ ಸಂಘ ಸಂಸ್ಥೆಗಳಿಗೆ ಕೊಡುತ್ತಿರುವ ಅನುದಾನವನ್ನು ಪ್ರತಿ ವರ್ಷ ಹೆಚ್ಚು ಮಾಡಬೇಕೇ ಹೊರತು ಕಡಿಮೆ ಮಾಡಿಕೊಂಡು ಹೋದರೆ ಹೇಗೆ ಅಥವಾ ಕನ್ನಡದ ಬಗ್ಗೆ ಸರ್ಕಾರದ ನೀತಿ ಇದು ಎಂದು ಸ್ಪಷ್ಟ ಮಾಡಿಬಿಡಿ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಎಷ್ಟು ಅಕಾಡಮಿಗಳಿಗೆ ಆಯವ್ಯಯದಲ್ಲಿ ಎಷ್ಟೆಷ್ಟು ಹಣವನ್ನು ಇಟ್ಟಿದ್ದಾರೆ? ವಿವಿಧ ಅಕಾಡಮಿಗಳಿಗೆ ಹಣವನ್ನು ಇಡುವುದರಲ್ಲಿ ತಾರತಮ್ಯವಿದೆಯೇ? ಟೋಟಲ್ ಎಷ್ಟು ಹಣವನ್ನು ಆಯವ್ಯಯದಲ್ಲಿ ಒದಗಿಸಿದ್ದಾರೆ? ಒಂದು ಕೋಟಿ ರೂ ಒದಗಿಸಿದ್ದಾರೋ? ಐವತ್ತು ಲಕ್ಷರೂ ಒದಗಿಸಿದ್ದಾರೋ? ಟೋಟಲ್ ಅಕಾಡಮಿಗಳು ಎಷ್ಟು? ಒದಗಿಸಿರುವ ಹಣದಲ್ಲಿ ಕಡಿಮೆ ಮಾಡಲು ಕಾರಣವೇನು? ಇನ್ನೂ ಹೆಚ್ಚು ಹಣವನ್ನು ಕೊಡುವಂಥ ಕೆಲಸವನ್ನು ಮಾಡುತ್ತಾರೆಯೇ ಎಂಬುದನ್ನು ಮಾನ್ಯ ಸಚಿವೆಯರು ತಿಳಿಸಬೇಕು.

ಶ್ರೀಮತಿ ರಾಣಿಸತೀಶ್ (ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ಇಲಾಖೆಗೆ ಆರ್ಥಿಕ ವೆಚ್ಚವನ್ನು ಕಡಿಮೆ ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿದರು. ಸಾಹಿತ್ಯ ಸಮ್ಮೇಳನದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ಪೋಷಣೆ ಮಾಡಿದನ್ನೂ ಪ್ರಸ್ತಾಪ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಮಾತ್ರ ಆಯವ್ಯಯದಲ್ಲಿ ಕಡಿತವಾಗಿಲ್ಲ, ಎಲ್ಲಾ ಇಲಾಖೆಗಳಿಗೂ ಆರ್ಥಿಕ ಇಲಾಖೆಯ ಯೋಜನಾ ವೆಚ್ಚದಲ್ಲಿ ಕಡಿತ ಮಾಡಲಾಗಿದೆ. ಇತ್ತೀಚಿಗೆ ಕೆಲವು ಸಂಸ್ಥೆಗಳಿಗೆ ಅನುದಾನವನ್ನೇನು ಹಿಂದಕ್ಕೆ ಪಡೆದಿದ್ದೆವೋ ಅದನ್ನು ವಾಪಸ್ ಪಡೆದಿದ್ದೇವೆಂದು ಹೇಳಿದ್ದಾರೆ. ಆದರೆ ಅದನ್ನು ವಾಪಸ್ ಪಡೆದಿಲ್ಲ, ಅದನ್ನು ತಡೆಹಿಡಿಯಲಾಗಿದೆ ಎಂಬ ಮಾತನ್ನು ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ತಾವು ಇದನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದೀರಿ ಎಂಬ ಭಾವನೆಯಿಂದ ಹೇಳುತ್ತಿದ್ದೇನೆ. ಅದು ಅಕಾಡಮಿಗಳಲ್ಲ. ಶಾಶ್ವತ ಅನುದಾನವನ್ನು ತೆಗೆದುಕೊಳ್ಳುತ್ತಿದ್ದಂಥ ಏಳು ಸಂಸ್ಥೆಗಳ ವಿಚಾರದಲ್ಲಿ ಆ ಆಜ್ಞೆಯನ್ನು ತಡೆಹಿಡಿಯಲಾಗಿರತಕ್ಕದ್ದು. ನಮ್ಮಲ್ಲಿ ಹತ್ತು ಅಕಾಡಮಿಗಳು ಇದೆ. ಅದರಲ್ಲಿ 2001-2002 ರಲ್ಲಿ ಯೋಜನೆ ಮತ್ತು ಯೋಜನೇತರದಲ್ಲಿ 112.44 ಲಕ್ಷರೂ. ಬರುತ್ತಿತ್ತು. 2002-2003ರ ಯೋಜನೆ ಮತ್ತು ಯೊಜನೇತರದಲ್ಲಿ 166 ಲಕ್ಷರೂಗಳಿಗೆ ಹೆಚ್ಚು ಮಾಡಲಾಗಿದೆ. ಈಗ ಎರಡು ಲಕ್ಷ ರೂಪಾಯಿಗಳು ಕಡಿತವಾಗಿದೆ. ಅದರಲ್ಲಿ ಯಾವ್ಯಾವ ಅಕಾಡಮಿಗಳು ಇದೆಯೆಂಬ ಬಗ್ಗೆ ಕೇಳಿದ್ದಾರೆ. ಉರ್ದು ಅಕಾಡಮಿಗೆ 2002-2003ನೇ ಸಾಲಿನಲ್ಲಿ ಯೋಜನೆ 8 ಲಕ್ಷರೂ, ಯೋಜನೇತರ 8.35 ಲಕ್ಷ. ರೂ ಸಾಹಿತ್ಯ ಅಕಾಡಮಿಗೆ ಯೋಜನೆಗಾಗಿ 12 ಲಕ್ಷ, ರೂ ಯೋಜನೇತರ 8.35 ಲಕ್ಷ.ರೂ ಸಂಗೀತ ಅಕಾಡಮಿಗೆ ಯೋಜನೆ 12 ಲಕ್ಷ ರೂ, ಯೋಜನೇತರ 8.35 ಲಕ್ಷ ರೂ, ನಾಟಕ ಅಕಾಡಮಿಗೆ ಯೋಜನೆಯಲ್ಲಿ 12 ಲಕ್ಷ ರೂ ಯೋಜನೇತರ 8.35 ಲಕ್ಷ. ರೂ ಲಲಿತ ಕಲೆ ಅಕಾಡಮಿಗೆ ಯೋಜನೆ 12 ಲಕ್ಷ, ರೂ

ಯೋಜನೇತರ 8.35 ಲಕ್ಷ. ರೂ ಜಾನಪದದಲ್ಲಿ ಯೋಜನೆ 12 ಲಕ್ಷರೂ, ಯೋಜನೇತರ 8.35ಲಕ್ಷರೂ. ಇದೇ ರೀತಿ ಕೊಡವ, ಕೊಂಕಣಿ, ತುಳು ಮತ್ತು ಶಿಲ್ಪಕಲಾ ಅಕಾಡಮಿಗಳಿಗೂ ಕೊಟ್ಟಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಒಂದೊಂದು ಕೋಟಿ ರೂ ಹಣವನ್ನು ಕೊಡಬೇಕೆಂದು ಮಾನ್ಯ ಸಿಂಧ್ಯಾರವರು ಕೇಳಿದ್ದರು. ಹತ್ತು ಅಕಾಡಮಿಗಳಿಗೆ ಹತ್ತು ಕೋಟಿ ರೂ. ಕೊಡಬೇಕು. ಇವರು ಕೊಟ್ಟಿರತಕ್ಕದ್ದು 1 ಕೋಟಿ 66 ಲಕ್ಷ. ರೂಗಳು ಇಷ್ಟೂ ಅಕಾಡಮಿಗಳ ಅಭಿವೃದ್ಧಿಗೆ ಕೇವಲ 1 ಕೋಟಿ 66 ಲಕ್ಷ ರೂ ಎಂದು ಹೇಳಿದ್ದಾರೆ. ಇಷ್ಟು ಹಣದಲ್ಲಿ ಅಕಾಡಮಿಗಳು ಯಾವ ರೀತಿಯಲ್ಲಿ ಅಭಿವೃದ್ಧಿಯಾಗುತ್ತದೆ? ಅಕಾಡಮಿಗಳು ಬದುಕುವುದು ಹೇಗೆ? ಕನ್ನಡ ಬೆಳೆಯುವುದು ಹೇಗೆ? ಆರ್ಥಿಕವಾಗಿ ಇದಕ್ಕೆ ಶಕ್ತಿ ತುಂಬದಿದ್ದರೆ, ಸಾಹಿತ್ಯ ಸಮ್ಮೇಳನ, ವಿಶ್ವ ಕನ್ನಡ ಸಮ್ಮೇಳನ ಇವುಗಳನ್ನೆಲ್ಲಾ ಮಾಡಿಕೊಂಡು ಹೋಗಿ ಕನ್ನಡ ಸಂಸ್ಕೃತಿ ಇಲಾಖೆಯಿಂದ ಶಕ್ತಿ ತುಂಬದಿದ್ದರೆ ಹೇಗೆ? ಈ ವರ್ಷವಾದರೂ ಮುಖ್ಯಮಂತ್ರಿಗಳ ಜೊತೆ ಸಮಾಲೋಚಿಸಿ ಒಂದೊಂದು ಅಕಾಡಮಿಗಳಿಗೆ ಒಂದೊಂದು ಕೋಟಿ ಕೊಡದಿದ್ದರೆ ಹೇಗೆ? ಯೋಜನೆ 12 ಲಕ್ಷ ರೂ, ಯೋಜನೇತರ 8 ಲಕ್ಷ ರೂ ಎಂದು ಹೇಳುತ್ತೀರಿ, ಆ ನಾಲ್ಕು ಲಕ್ಷರೂನಲ್ಲಿ ಏನು ಅಭಿವೃದ್ಧಿ ಮಾಡಲು ಆಗುತ್ತದೆ? ಬಹಳ ಸಣ್ಣಪ್ರಮಾಣದಲ್ಲಿ ಅಭಿವೃದ್ಧಿಯನ್ನು ತೋರಿಸುತ್ತಿದ್ದೀರ. ಕಳೆದ ಸಲ 112 ಲಕ್ಷ ರೂ ಈ ಸಲ 160 ಲಕ್ಷ. ರೂ ಇದು ಬಹಳ ತಲೆತಗ್ಗಿಸತಕ್ಕದ್ದು.

ಶ್ರೀಮತಿ ರಾಣಿಸತೀಶ್: ಅಕಾಡಮಿಗಳ ಜೊತೆ ಜೊತೆಯಾಗಿ ಇನ್ನಿತರ ಕಾರ್ಯಕ್ರಮಗಳಿಗೆ ಯೋಜನೆ ಮತ್ತು ಯೋಜನೇತರ ಸೇರಿ ಸುಮಾರು ಒಂದೂವರೆ ಕೋಟಿ ಹಣವನ್ನು ಇಟ್ಟುಕೊಂಡಿದ್ದೇವೆ. ಅಕಾಡಮಿಗಳನ್ನು ಬಿಟ್ಟು ತಾವೇನು ಹೇಳಿದ್ದೀರಿ ಆ ಕಾರ್ಯಕ್ರಮಗಳಿಗಾಗಿ ಪ್ರತ್ಯೇಕವಾಗಿ ಹಣವನ್ನು ಕೊಡುತ್ತೇವೆ. ಜೊತೆಗೆ ಯಾವುದೇ ಅನುದಾನಿತ ಸಂಸ್ಥೆಗಳಿಗೂ ಅನುದಾನವನ್ನು ಕಡಿಮೆ ಮಾಡಿರುವುದಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪ್ರದರ್ಶನ ಕಲೆ, ಸಾಹಿತ್ಯಾಭಿವೃದ್ಧಿ, ಕನ್ನಡ ಸಂಘಸಂಸ್ಥೆಗಳಿಗೆ, ಇತ್ಯಾದಿಗಳಿಗೆ ಒಂದೂವರೆ ಕೋಟಿ ರೂ ಹಣವನ್ನು ಪ್ರತ್ಯೇಕವಾಗಿ ಮೀಸಲಾಗಿಟ್ಟಿದ್ದೇವೆ.

ಶ್ರೀ ಎನ್. ಯೋಗೇಶ್‌ಭಟ್: ಮಾನ್ಯ ಅಧ್ಯಕ್ಷರೆ, ತಾವು ಅಕಾಡಮಿಗಳಿಗೆ ಕೊಡುವಂಥ ಹಣದಲ್ಲೂ ಹೊಸದಾದ ಜವಾಬ್ದಾರಿಯನ್ನು ಹೊರಿಸುತ್ತಿದ್ದೀರಿ. ಕನ್ನಡ ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟ ಕೆಲಸಗಳನ್ನು, ಯೋಜನೆಗಳನ್ನು ಈ ಅಕಾಡಮಿಯವರೇ ನಿರ್ವಹಿಸಬೇಕೆಂದು ಒಂದು ಆದೇಶ ಬಂದಿದೆ. ಆ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ಮಾಡಬೇಕಾಗಿರುವುದರಿಂದ, ಕೊಟ್ಟಿರುವ ಹಣವನ್ನೂ ಕಡಿತಗೊಳಿಸಿದ್ದೀರಿ, ಅದರ ಜೊತೆಗೆ ಇಲಾಖಾ ಕಾರ್ಯಕ್ರಮಗಳನ್ನೂ ಇದರಲ್ಲಿ ಮಾಡಬೇಕೆಂದು ಮಾಡಿದರೆ ಯಾವ ರೀತಿಯಲ್ಲಿ ಭಾಷಾ ಅಭಿವೃದ್ಧಿಯನ್ನು ಮಾಡಬಹುದು? ಇಂಥ ಗಂಭೀರ ಸಮಸ್ಯೆ ಉದ್ಭವಿಸಿದೆ, ದಯವಿಟ್ಟು ಕನ್ನಡ ಸಂಸ್ಕೃತಿ ಇಲಾಖೆಯ ಯೋಜನೆಗಳನ್ನು ಈ ಅಕಾಡಮಿಗಳ ಮೂಲಕ ಮಾಡಿಸಬಾರದೆಂದು ವಿನಂತಿಸುತ್ತೇನೆ.

ಶ್ರೀಮತಿ ರಾಣಿಸತೀಶ್: ಇತ್ತೀಚೆಗೆ ಕನ್ನಡ ಸಂಘ ಸಂಸ್ಥೆಗಳಿಗೇನು ಅನುದಾನ ಕೊಡುತ್ತಿದ್ದೇವೆ, ಅದು ಬೆಂಗಳೂರು ನಗರಕ್ಕೆ ಮತ್ತು ನಗರ ಪ್ರದೇಶಗಳಿಗೆ ಸೀಮಿತವಾಗಬಾರದು ಎಂಬ ಭಾವನೆಯಿಂದ ಗ್ರಾಮಾಂತರ ಮಟ್ಟದಲ್ಲಿ ಕಲೆಗೆ, ಕಲಾವಿದರಿಗೆ ಹೆಚ್ಚು ಪ್ರೋತ್ಸಾಹ

ಕೊಡತಕ್ಕ ನಿಟ್ಟಿನಲ್ಲಿ 176 ತಾಲ್ಲೂಕುಗಳಿಗೂ 25 ಸಾವಿರ ರೂಪಾಯಿಗಳಂತೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಅದಕ್ಕೂ ಅಕಾಡಮಿಗಳಿಗೂ ಯಾವುದೇ ಸಂಬಂಧವಿಲ್ಲ. ಗ್ರಾಮಾಂತರ ಮಟ್ಟದಲ್ಲಿರುವ ಸಂಘ ಸಂಸ್ಥೆಗಳಿಗೆ ಆರ್ಥಿಕ ನೆರವನ್ನು ನೀಡುವಂಥ ಸದುದ್ದೇಶದಿಂದ ಅದನ್ನು ಮಾಡಿದ್ದೇವೆಯೇ ಹೊರತು ಅಕಾಡಮಿಗಳಿಗೂ ಇದಕ್ಕೂ ಯಾವುದೇ ರೀತಿಯಾದ ಸಂಬಂಧವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾನು ಕೇವಲ ಅಕಾಡಮಿಗಳಿಗಷ್ಟೇ ಅಲ್ಲ ಕೇಳಿರತಕ್ಕದ್ದು. ಸಂಘ ಸಂಸ್ಥೆಗಳಿಗೂ ನೀಡುತ್ತಿರುವ ಅನುದಾನವನ್ನು ಕಡಿತ ಮಾಡಿರುವ ಬಗ್ಗೆ ಕೇಳಿದ್ದೆ. ತಾವು ಸಂಘ ಸಂಸ್ಥೆಗಳಿಗೆ ಅನುದಾನವನ್ನು ಕಡಿತಗೊಳಿಸಿಲ್ಲವೆಂದು ಹೇಳಿದ್ದೀರಿ ವಿಧಾನ ಪರಿಷತ್ತಿನಲ್ಲಿ ಕಡಿತಗೊಳಿಸಿರತಕ್ಕಂಥ ಆಜ್ಞೆಯನ್ನು ರದ್ದು ಮಾಡಿದ್ದೇವೆಂದು ಹೇಳಿ ಇಲ್ಲಿ ಕೇವಲ ತಾತ್ಕಲಿಕವಾಗಿ ತಡೆ ಮಾಡಿದ್ದೇವೆಂದು ಹೇಳಿದ್ದೀರಿ. ಇದರಲ್ಲಿ ಸತ್ಯ ಯಾವುದು? ಅದನ್ನು ವಾಪಸ್ ತೆಗೆದುಕೊಂಡಿದ್ದೀರೋ ಇಲ್ಲವೋ? ತಾತ್ಕಲಿಕವಾಗಿ ತಡೆ ಹಿಡಿದಿದ್ದೇವೆಂದರೆ ಎಷ್ಟು ದಿವಸ ತಡೆ ಹಿಡಿದಿದ್ದೀರಿ ಎಂಬುದನ್ನು ಸಭೆಗೆ ತಿಳಿಸಬೇಕು. ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬಾಕಿ ವಿಚಾರದಲ್ಲಿ ಯೋಜನಾ ವೆಚ್ಚ ಕಡಿಮೆ ಮಾಡಿಕೊಳ್ಳತಕ್ಕದ್ದು ಆಗಲಿ. ರಿಸೋರ್ಸ್‌ಸ್ ಮೊಬಿಲೈಸ್ ಮಾಡುವುದಕ್ಕಾಗಲಿಲ್ಲ, ಬರಗಾಲ ಬಂದಿದೆ ಎಂದು ಹಣಕಾಸಿನ ಮಂತ್ರಿಗಳು ಹೇಳಿದರೆ ಅದನ್ನು ಒಪ್ಪುತ್ತೇನೆ. ಆದರೆ ಕನ್ನಡದ ಕೆಲಸಕ್ಕೆ ಯೋಜನಾ ಗಾತ್ರವನ್ನು ಕಡಿತಗೊಳಿಸುವ ವಿಚಾರ ಸರಿಯಲ್ಲ. ಅಕಾಡಮಿಗಳು ಹಣವನ್ನು ಶೇಖರಣೆ ಮಾಡುವುದಕ್ಕೆ, ರಿಸೋರ್ಸ್‌ನ್ನು ಮೊಬಿಲೈಸ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರ ಏನು ಕೊಡುತ್ತದೆ ಅದರ ಮೇಲೆ ಮಾತ್ರ ಅವರು ಕಾರ್ಯಚಟುವಟಿಕೆಗಳನ್ನು ಮಾಡಬೇಕಾಗುತ್ತದೆ. ಅದರಲ್ಲೂ ಪ್ರತಿ ವರ್ಷ ಅನುದಾನವನ್ನು ಕಡಿಮೆ ಮಾಡಿಕೊಂಡು ಬಂದರೆ ಆ ಅಕಾಡಮಿಗಳು ಹೇಗೆ ಜೀವಂತವಾಗಿರುತ್ತದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಅನುದಾನವನ್ನು ಹೆಚ್ಚು ಮಾಡಿಕೊಂಡು ಹೋಗಬೇಕೇ ವಿನಹ ಅದನ್ನು ಕಡಿಮೆ ಮಾಡಿಕೊಂಡು ಹೋದರೆಹೇಗೆ?

ಶ್ರೀಮತಿ ರಾಣಿಸತೀಶ್: ಶಾಶ್ವತ ಅನುದಾನವನ್ನು ಕೊಡುತ್ತಿರುವ ಸಂಸ್ಥೆಗಳಿಗೂ ಅಕಾಡಮಿಗಳಿಗೂ ಪ್ರತ್ಯೇಕವಾಗಿ ತಾವು ಪ್ರತ್ಯೇಕವಾಗಿ ವಿಭಜನೆ ಮಾಡಿ ಗಮನಿಸಬೇಕು. ಅಕಾಡಮಿಗಳಿಗೆ ನಾವು ಕೊಡುತ್ತಿರುವ ಹಣದ ಬಗ್ಗೆ ಆಗಲೇ ವಿವರಣೆ ನೀಡಿದೆ. ತಾವು ಹೇಳುತ್ತಿರತಕ್ಕದ್ದು ಏಳು ಸಂಘ ಸಂಸ್ಥೆಗಳ ಬಗ್ಗೆ. ಆ ಏಳು ಸಂಘ ಸಂಸ್ಥೆಗಳೇನು ಶಾಶ್ವತವಾಗಿ ಅನುದಾನವನ್ನು ಪಡೆಯುತ್ತಿದೆ ಅದಕ್ಕೆ ಆರ್ಥಿಕ ವ್ಯವಸ್ಥೆಯಲ್ಲಿ ನಾವು ಕಡಿತ ಮಾಡಿಲ್ಲ. ಆದರೆ ಇಲ್ಲಿ ವ್ಯತ್ಯಾಸ ಇದೆ. ನಿಮ್ಮ ಪ್ರಶ್ನೆ ಬೇರೆ ಇದೆ. ನೀವು ಕೇಳಿದಿರಿ ಎಂದು ಈಗ ನಾನು ಹೇಳುತ್ತಿದ್ದೇನೆ. ಸಹಾಯಧನವನ್ನು ಕೇವಲ ಆಯಾ ಸಂಸ್ಥೆಗಳು ಸಿಬ್ಬಂದಿ ವರ್ಗಗಳ ವೇತನಕ್ಕೆ ಮಾತ್ರ ಉಪಯೋಗಿಸಲು ಅವಕಾಶ ಇತ್ತು. ನಾವು ಅದನ್ನು ವಿಸ್ತಾರ ಮಾಡಿ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಅದರ ವಿಸ್ತಾರತೆಯನ್ನು ಹೆಚ್ಚಿಸುವಂತಹ ನಿಟ್ಟಿನಲ್ಲಿ ಅದನ್ನು ತೆಗೆದುಕೊಂಡಿದ್ದೇವೆ. ಆ ಅನುದಾನವನ್ನು ಯಾವುದೇ ಕಾರಣಕ್ಕಾಗಿ ನಿಲ್ಲಿಸಿಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ವ್ಯತ್ಯಾಸಗಳನ್ನು ನಾವು ಸರಿ ಮಾಡಿಕೊಳ್ಳುವ ಹಂತದಲ್ಲಿ ಆ ವಿಶ್ಲೇಷಣೆಯನ್ನು ಮಾಡತಕ್ಕಂಥದ್ದೇ ಹೊರತು, ಅದನ್ನು ನಿಲ್ಲಿಸುವಂತಹ ಅಭಿಪ್ರಾಯ ಖಂಡಿತಾ ಸರ್ಕಾರಕ್ಕಿಲ್ಲ. ಸರ್ಕಾರಿ ಆಜ್ಞೆಯನ್ನು ತಡೆಹಿಡಿದಿರುವುದರ ಬಗ್ಗೆ ತಾವು ಹೇಳಿದಿರಿ, ಮೇಲ್ಮನೆಯಲ್ಲಿ ಅದರ ಬಗ್ಗೆ ಚರ್ಚೆಯಾಯಿತು. ಅದರ ಬಗ್ಗೆ ಹೇಳುವುದಾದರೆ, ನಾವು ಅದನ್ನು ವಾಪಸ್ ತೆಗೆದುಕೊಂಡಿದ್ದೇವೆ.

ಅದರ ಬಗ್ಗೆ ಇತ್ಯರ್ಥ ಮಾಡುವ ಸಲುವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇದನ್ನು ಚರ್ಚೆ ಮಾಡಿ ಇದರ ಬಗ್ಗೆ ಶೀಘ್ರವಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇದರೆ ಬಗ್ಗೆ ನಾನು ಇನ್ನೊಂದು ವಿಷಯವನ್ನು ಸದನದ ಗಮನಕ್ಕೆ ತರುತ್ತೇನೆ. ಆಡಳಿತದ ಸುಧಾರಣಾ ಆಯೋಗವೂ ಸಹ ತನ್ನ ವರದಿಯಲ್ಲಿ ವಿಜಯ ಫಿಲಂ ಸಂಸ್ಥೆ ಹಾಗೂ ಆದರ್ಶ ಫಿಲಂ ಸಂಸ್ಥೆಯಂತಹ ಸಹಾಯಾನುದಾನಿತ ಸಂಸ್ಥೆಗಳಿಗೆ ಅನುದಾನವನ್ನು ನಿಲ್ಲಿಸತಕ್ಕಂಥ ಶಿಫಾರಸ್ಸನ್ನು ಮಾಡಿರುವುದನ್ನು ತಾವು ಗಮನಿಸಬೇಕು. ಮತ್ತೆ ಇಲಾಖಾ ವಿಷಯ ಸಮಿತಿಯೂ ಸಹ ಅನುದಾನಿತ ಸಂಸ್ಥೆಗಳಿಗೆ ಹೆಚ್ಚು ಹಣವನ್ನು ನೀಡುವ ಬದಲಿಗೆ ಅದರ ವಿಸ್ತಾರತೆಯನ್ನು ಹೆಚ್ಚು ಸಂಘ ಸಂಸ್ಥೆಗಳಿಗೆ ವಿಸ್ತರಣೆ ಮಾಡಿ ಎನ್ನುವಂತಹ ಒಂದು ಸಲಹೆಯನ್ನೂ ಸಹ ಮಾಡಿರುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ, ಅಕಾಡೆಮಿಗಳಿಗೂ ಇದಕ್ಕೂ ಇರುವಂತಹ ವ್ಯತ್ಯಾಸವನ್ನು ನಾನು ನಿಮಗೆ ಹೇಳಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಅಕಾಡೆಮಿಗಳಿಗೂ ಸಂಘ ಸಂಸ್ಥೆಗಳಿಗೂ ಕೊಡುತ್ತಿರತಕ್ಕಂಥ ಅನುದಾನ, ಅದರಲ್ಲಿ ಇರತಕ್ಕಂಥ ವ್ಯತ್ಯಾಸ ನನಗೆ ಗೊತ್ತಿದೆ. ನಾನು ಮೂಲಭೂತವಾಗಿ ಕೇಳುತ್ತಿರತಕ್ಕಂಥದ್ದು, ನಿಮ್ಮ ಸರ್ಕಾರ ನೀತಿ ಇದೇನಾ? ಪ್ರತಿ ವರ್ಷವೂ ಅನುದಾನವನ್ನು ಕಡಿಮೆ ಮಾಡಿಕೊಂಡು ಹೋಗುತ್ತೀರಾ? ಏಕೆಂದರೆ, ಅಕಾಡೆಮಿಗಳು, ಅಲ್ಲಿರತಕ್ಕಂಥ ಅಧ್ಯಕ್ಷರು ....

ಅಧ್ಯಕ್ಷರು: ಕಡಿತ ಮಾಡಿಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾಡಿದ್ದಾರೆ ಸಾರ್. ಮಾನ್ಯ ಸಚಿವರು ಆ ಬಗ್ಗೆ ಉತ್ತರ ಕೊಟ್ಟಿದ್ದಾರೆ. ರಿಟನ್ ಆನ್ಸರ್ ಇದು. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಅನುದಾನವನ್ನು ನಾನು ಕಡಿಮೆ ಮಾಡಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಹಾಗಾದರೆ ಇದೇ ನಿಮ್ಮ ನೀತಿಯೇ? ನಾನು ಇನ್ನೇನೂ ಅವರಿಗೆ ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಕನ್ನಡದ ಬಗ್ಗೆ ಸರ್ಕಾರದ ಧೋರಣೆ ಇದು ಎಂದು ಹೇಳಿದರೆ ನನ್ನದೇನೂ ತಕರಾರು ಇಲ್ಲ. ಪ್ರಶ್ನೋತ್ತರ ವೇಳೆಯಲ್ಲಿ ಮತ್ತೆ ಏನನ್ನು ನಾನು ಅಪೇಕ್ಷೆ ಮಾಡುವುದಕ್ಕಾಗುತ್ತದೆ? ಹಾಗಾದರೆ ಇದು ಸರ್ಕಾರದ ನೀತಿಯೇ?

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಈ 2001-2002ಕ್ಕೂ 2002-2003ಕ್ಕೂ ಇರುವಂತಹ ವ್ಯತ್ಯಾಸವನ್ನು ತಾವು ಗಮನಿಸಬೇಕು. ಮುಂಚೆ 122 ಲಕ್ಷ ರೂಪಾಯಿಗಳು ಇದ್ದದ್ದನ್ನು 166 ಲಕ್ಷ ರೂಪಾಯಿಗಳಿಗೆ ನಾವು ಹೆಚ್ಚು ಮಾಡಿದ್ದನ್ನು ತಾವು ಗಮನಿಸಿದ್ದೀರಿ. ಈಗ ಎಲ್ಲಾ ಇಲಾಖೆಗಳಿಗೂ ಅನ್ವಯವಾಗುವಂತೆ ಯೋಜನಾ ವೆಚ್ಚ ಕಡಿತ ಮಾಡಿರುವಂತೆ ನಮ್ಮಲ್ಲೂ 2 ಲಕ್ಷ ರೂ ಕಡಿತ ಮಾಡಿರುವಂತಾದ್ದನ್ನು ನಾನು ತಮ್ಮ ಗನಮಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಅದರ ಹಿಂದಿನದು 2002-2003ರಲ್ಲಿಯೂ, 2001-2002ಕ್ಕೂ ವ್ಯತ್ಯಾಸ ನೀವು ನೋಡಿದರೆ ಅದು ಎಷ್ಟು ದುಪ್ಪಟ ಆಗಿದೆ ಎನ್ನುವುದನ್ನು ತಾವು ಗಮನಿಸಬಹುದು.

ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮಗಳು

129 (837) ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?